# ಸ್ವಾಮಿ ಓಂಕಾರಾನಂದ (೧೮೯೮-೧೯೭೩)

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ**

ಅನುವಾದ: **ಕುಮಾರಿ ಪಿ. ಉಷಾ**

**ಈ** ಜಗತ್ತಿನಲ್ಲಿ ಭಗವಂತನು ಒಬ್ಬನಿಗೆ ದುರ್ಬಲ ಶರೀರ ಹಾಗೂ ತೀಕ್ಷ್ಣ ಬುದ್ಧಿಶಕ್ತಿಯನ್ನು ನೀಡಿದ್ದರೆ, ಮತ್ತೊಬ್ಬನಿಗೆ ಬಲಿಷ್ಠ ದೇಹ ಹಾಗೂ ಮಂದ ಬುದ್ಧಿಶಕ್ತಿಯನ್ನು ಕೊಟ್ಟಿರುತ್ತಾನೆ. ಆದರೆ ಓಂಕಾರಾನಂದಜಿಯವರಿಗೆ ಸ್ವಸ್ಥ ಹಾಗೂ ಸಬಲ ಶರೀರ ವನ್ನೂ, ತೀಕ್ಷ್ಣ ಹಾಗು ಚುರುಕಾದ ಬುದ್ಧಿಯನ್ನೂ ಪವಿತ್ರತೆ ಯನ್ನೂ, ತೇಜಸ್ಸು ಹಾಗೂ ತುಂಬು ಹೃದಯದ ಪ್ರೀತಿಯನ್ನೂ ಕರುಣಿಸಿದ್ದನು. ಅವರ ತೀವ್ರ ಪುರುಷಕಾರ, ಅಗಾಧ ಶಾಸ್ತ್ರ ಜ್ಞಾನ, ಅಪೂರ್ವ ಮೇಧಾಶಕ್ತಿ, ಶ್ರೀರಾಮಕೃಷ್ಣ-ಶ್ರೀಮಾತೆ-ಸ್ವಾಮೀಜಿಯವರ ಮೇಲೆ ಅವರಿಗಿದ್ದ ಭಕ್ತಿ ಹಾಗು ತೀಕ್ಷ್ಣ ವಾಕ್ಶಕ್ತಿಗಳು ಸಾಧು, ಭಕ್ತರನ್ನು ಮುಗ್ಧಗೊಳಿಸಲು ಪ್ರೇರಣೆ ಯನ್ನು ನೀಡುತ್ತಿದ್ದವು. ಅವರು ದುಃಖತಪ್ತರಾದವರನ್ನು ಹೇಗೆ ಸಂತೋಷಪಡಿಸುತ್ತಿದ್ದರೆಂಬುದು ಅವರೊಂದಿಗೆ ಒಡನಾಡಿದವ ರಿಗೆ ತಿಳಿದಿದೆ. ರಾಮಕೃಷ್ಣ ಸಂಘದ ಇಂತಹ ವಿಶಿಷ್ಟ ಸಂನ್ಯಾಸಿಗಳ ಸಂಪೂರ್ಣ ಜೀವನಗಾಥೆ ಲಿಪಿಬದ್ಧವಾಗದಿರುವುದು ದುಃಖದ ವಿಷಯವೇ ಸರಿ.



೧೯೬೦ನೆಯ ಇಸವಿ ನಾನು ಆಗ ತಾನೇ ಅದ್ವೈತ ಆಶ್ರಮ ವನ್ನು ಸೇರಿದ್ದೆ. ನಮ್ಮ ಪಬ್ಲಿಕೇಷನ್ ಆಫೀಸಿಗೆ ಭಾನುವಾರ ದಂದು ರಜೆಯಿದ್ದುದರಿಂದ ನಾವು ಒಮ್ಮೆ ಬೇಲೂರು ಮಠ ಅಥವಾ 'ಉದ್ಬೋಧನ' ಇಲ್ಲವೆ ಕಾಂಕುರಗಾಛಿಗೆ ಹೋಗಿ, ದಿನ ವೆಲ್ಲ ವೃದ್ಧ ಹಾಗು ಹಿರಿಯ ಸಾಧು-ಸಂಗವನ್ನು ಮಾಡಿ ಸಂಜೆ ಯಾಗುತ್ತಲೇ ಆಶ್ರಮಕ್ಕೆ ಹಿಂದಿರುಗುತ್ತಿದ್ದೆವು. ಒಂದು ಭಾನು ವಾರ ದಿವ್ಯಾಂಶು ಮಹಾರಾಜ್, ವಿಧಾನ ಮಹಾರಾಜ್, ರಾಮ ಮಹಾರಾಜ್ ಹಾಗು ನಾನು ಓಂಕಾರಾನಂದಜಿಯವರ ಹತ್ತಿರ ಹೋಗಿ ಕಾಂಕುರಗಾಛಿಯಲ್ಲಿ ಪ್ರಸಾದವನ್ನು ಪಡೆದುದು ನನಗೆ ಸ್ಪಷ್ಟವಾಗಿ ನೆನಪಿದೆ. ಸಂಜೆಯ ಹೊತ್ತಿಗೆ ನಮಗಾಗಿ ಕಾಫಿ ಮಾಡಿ ಕೊಡುತ್ತ ಹೇಳಿದರು, ''ನೋಡು, ಗಾಡಿಯವನು, ಕೂಲಿ ಮಾಡುವವನು, ರಿಕ್ಷಾ ನಡೆಸುವವನು — ಇವರೆಲ್ಲ ಚಹಾ ಕುಡಿಯುತ್ತಾರೆ; ಕವಿಗಳು, ಚಿಂತಕರು, ದಾರ್ಶನಿಕರು, ವಿಜ್ಞಾನಿ ಗಳು ಕಾಫಿ ಕುಡಿಯುತ್ತಾರೆ. ನೀವು ಕಾಫಿ ಕುಡಿಯಿರಿ.'' ನಾವು ಗಣ್ಯ ವ್ಯಕ್ತಿಗಳಾಗಬೇಕೆಂದು ಅವರು ಬಯಸಿದ್ದರು.

ಸತ್ಸಂಗ-ಮಾತುಕತೆ ನಡೆದವು. ನನ್ನನ್ನುದ್ದೇಶಿಸಿ ಅವರೆಂ ದರು, ''ನೋಡಿ, ನಿಮಗೆಲ್ಲ ಒಂದು ವಿಷಯವನ್ನು ಹೇಳು ತ್ತೇನೆ. ನಾನು ಕಲ್ಕತ್ತದವನು. ಇಲ್ಲಿ ಜೀವನ ನಡೆಸಬೇಕೆಂದರೆ ದಿನಾ ಚೆನ್ನಾಗಿ ಬೆವರು ಸುರಿಸಬೇಕು (ಅರ್ಥಾತ್ exercise ಮಾಡಬೇಕು).'' ಮತ್ತೆ ಮುಂದುವರಿಸುತ್ತ, ''ಈಗಿನ ಹುಡು ಗರು ಠಾಕೂರ್ (ಶ್ರೀರಾಮಕೃಷ್ಣರು), ಸ್ವಾಮೀಜಿಯವರ ಬಗ್ಗೆ ಎರಡು ಪುಟಗಳನ್ನೋದಿ ಮಠಕ್ಕೆ ಸೇರಿ ತಾವು ಸರ್ವಜ್ಞರೆಂದು ಕೊಳ್ಳುತ್ತಾರೆ. ನೀವು ಅಂಥ ಸರ್ವಜ್ಞರಾಗಬಾರದು, ಜೋಕೆ. ಠಾಕೂರ್-ಸ್ವಾಮೀಜಿಯವರ ಪುಸ್ತಕಗಳನ್ನು ಅಧ್ಯಯನ ಮಾಡ ಬೇಕು. ವಿಷಯಗಳ ಆಳಕ್ಕೆ ಹೋಗಬೇಕು. ಅವರ ಭಾವದಲ್ಲಿ ಮುಳುಗಬೇಕು. ಮೇಲುಮೇಲಿನ ಜ್ಞಾನದಿಂದ ಏನೂ ಪ್ರಯೋ ಜನವಿಲ್ಲ. ಶಾಸ್ತ್ರಗಳ ಅಧ್ಯಯನ ಮಾಡಿ.''

ನಾನೆಂದೆ, ''ಮಹಾರಾಜ್, ನೀವು ಶ್ರೀಮಾತೆ ಹಾಗೂ ಠಾಕೂರರ ಶಿಷ್ಯರುಗಳ ನಿಕಟವರ್ತಿಗಳಾಗಿ ಅವರಿಂದ ಅದೆಷ್ಟು ಪ್ರೀತಿ, ಸ್ನೇಹ ಹಾಗು ಆಶೀರ್ವಾದವನ್ನು ಪಡೆದಿದ್ದೀರಿ! ಅವುಗ ಳನ್ನೆಲ್ಲ ನೀವು ಬರೆದರೆ ನಾವು ತಿಳಿದುಕೊಳ್ಳಬಹುದು.''

ಕೂಡಲೆ ಅವರು ಗಟ್ಟಿಯಾಗಿ ಹೇಳಿದರು, ''ಅವರ ಬಗ್ಗೆ ಯಾರು ತಾನೆ ಕೇಳಬಯಸುತ್ತಾರೆ?'' ಅವರು, 'ಉದ್ಬೋಧನ' ಪತ್ರಿಕೆಯಲ್ಲಿ 'ಅನಂತ' ಎಂಬ ಕಾವ್ಯನಾಮದಲ್ಲಿ, 'ಶ್ರೀರಾಮ ಕೃಷ್ಣರ ಸಂದೇಶದ ಬೆಳಕಿನಲ್ಲಿ ಬ್ರಹ್ಮ ಮತ್ತು ಶಕ್ತಿ ಅಭೇದ' ಹಾಗೂ 'ನಿತ್ಯ ಮತ್ತು ಲೀಲೆ' ಎಂಬ ಎರಡು ಲೇಖನಗಳನ್ನು

ಶಾಸ್ತ್ರವನ್ನೋದುವುದು ಹಾಗೂ ಶಾಸ್ತ್ರವನ್ನೋದಿಸುವುದನ್ನು ಬಿಡಲಿಲ್ಲ. ಅವರೊಬ್ಬ ಮಹಾನ್ ವಿದ್ವಾಂಸರೂ ಆಗಿದ್ದರು. ನಿಯಮಿತವಾಗಿ ರಾಮಕೃಷ್ಣ ಯೋಗೋದ್ಯಾನ, Institute of culture ಹಾಗೂ ಹೌರಾದ ರಾಮಕೃಷ್ಣ ವಿವೇಕಾನಂದ ಆಶ್ರಮದಲ್ಲಿ ಓಂಕಾರಾನಂದಜಿ ಇದ್ದಾಗ ಬಾದಲ್ ಬಾಬು ಅವರಿಗೆ ಒಂದು ಪ್ಲೇಟ್ ಸಂದೇಶವನ್ನು ಕೊಟ್ಟರು. ಅವರು ಎಲ್ಲವನ್ನೂ ತಿಂದು ಮುಗಿಸಿದರು. ತಾನು ಉಂಡಂತೆ ಇತರರಿಗೂ ಉಣಿಸುವರು. ಒಮ್ಮೆ ಶಂಕರೀ ಪ್ರಸಾದ ಬಸುಗೆ (ಇವರು ಪ್ರಸಿದ್ಧ ಬರಹಗಾರರು) ಹೇಳಿದ್ದರು, ''ನೋಡು ಶಂಕರಿ, ನನ್ನ ಕ್ಲಾಸಿನಲ್ಲಿ ಮುದುಕ-ಮುದುಕಿಯರನ್ನು ಮುಂದುಗಡೆ ಕುಳ್ಳಿರಿಸಬೇಡ. ಅವರನ್ನು ನೋಡಿದರೆ ಉಪನಿಷತ್ತುಗಳ ವಾಕ್ಯಗಳು ನನ್ನ ಬಾಯಿಂದ ಹೊರ ಬರುವುದು ಕಷ್ಟವಾಗುತ್ತದೆ. ಅಂದರೆ, ಈ ದೊಡ್ಡ ಹಾಲ್‌ನಲಿ luxurious seat ಗಳಲ್ಲಿ ಆರಾಮವಾಗಿ ಕುಳಿತು ಗಳಿಗೆಗೊಮ್ಮೆ ಗಡಿಯಾರ ನೋಡುತ್ತಿದ್ದರೆ ಉಪನಿಷತ್ತುಗಳ ಮರ್ಮ ತಿಳಿಯುವುದಿಲ್ಲ. ಉಪನಿಷತ್ತುಗಳನ್ನು ಕಲಿಯಬೇಕಾದರೆ ಕಾಲ-ದೇಶಗಳನ್ನು ಮರೆಯಬೇಕು.'' ಮಹಾರಾಜರು ಒಳ್ಳೆಯ ಭಾಷಣಕಾರರಾಗಿದ್ದರು. ಇದ್ದದ್ದನ್ನು ಇದ್ದ ಹಾಗೆ ಹೇಳಿಬಿಡುವ ಖಂಡಿತವಾದಿಯಾಗಿದ್ದರು. ಮಧುರವಾಗಿ ಸುಳ್ಳನ್ನೆಂದೂ ಹೇಳುವವರಲ್ಲ.

ನಮ್ಮ ಅದ್ವೈತ ಆಶ್ರಮದ ಗ್ರಂಥಪಾಲಕರಾಗಿದ್ದ ಸತ್ಯ ಬಾಬು ಓಂಕಾರಾನಂದಜಿಯವರ ಭಕ್ತರಾಗಿದ್ದರು. ಒಮ್ಮೆ ಅವರಿಗೆ ತಮಾಷೆಯಾಗಿ ಹೇಳಿದೆ, ''ನಾವು ಮಧುರವಾಗಿ ಮಾತನಾಡುತ್ತೇವೆ. ಆದರೆ ನೀವು ನಮ್ಮನ್ನು ಬಿಟ್ಟು ಮಹಾರಾಜರ ಬೈಗುಳವನ್ನು ಕೇಳಲು ಕಾಂಕುರಗಾಛಿಗೆ ಹೋಗುತ್ತೀರ!'' ಸತ್ಯಬಾಬು ಉತ್ತರಿಸಿದರು : ''ನೋಡಿ, ಅನಂಗ ಮಹಾರಾಜರ (ಇದು ಸ್ವಾಮಿ ಓಂಕಾರಾನಂದರ ಪೂರ್ವಾಶ್ರಮದ ಹೆಸರು) ಬೈಗುಳವೇ ಆಶೀರ್ವಾದ. ಅವರು ಬೈದರೆ ವ್ಯಕ್ತಿಯ ಕುಕರ್ಮಗಳು ನಾಶವಾಗುತ್ತವೆ.''

ಮಳೆಗಾಲದಲ್ಲಿ ಹೆಚ್ಚಾಗಿ ಕಾಂಕುರಗಾಛಿ ಆಶ್ರಮವು ನೀರಿನಲ್ಲಿ ಮುಳುಗಿ ಹೋಗುತ್ತಿದ್ದು ಮಂದಿರದೊಳಗೂ ನೀರು ಬಂದುಬಿಡುತ್ತಿತ್ತು. ಒಂದು ಸಲವಂತೂ ಠಾಕೂರರ ಅಸ್ಥಿಯಿರಿಸಿದ ಕಲಶದಲ್ಲೂ ನೀರು ಸೇರಿಕೊಂಡಿತು. ಆಗ ಮಹಾರಾಜರು ಕಲಶವನ್ನು ಹೊರತೆಗೆದು, ಠಾಕೂರರ ಅಸ್ಥಿ ಹಾಗು ಭಸ್ಮವನ್ನು ಬಿಸಿಲಿನಲ್ಲಿ ಒಣಗಿಸಿದರು. ಕಡು ಬಿಸಿಲಿನಲ್ಲಿ ಕೊಡೆ ಹಿಡಿದು ಕುಳಿತು ಎಲ್ಲವನ್ನೂ ಒಣಗಿಸಿ, ಬಳಿಕ ಅದನ್ನು ಹೊಸ ಕಲಶದಲ್ಲಿರಿಸಿ seal ಮಾಡಿಸಿದರು. ಅನಂತರ ಠಾಕೂರರ ಅಮೃತಶಿಲಾ ಮೂರ್ತಿಯನ್ನು ತಯಾರಿಸಲು ಯೋಜನೆ ತಯಾರಿಸಿದರು. ೧೯೬೪-೬೫ರಲ್ಲಿ ನಾನು ಬೇಲೂರು ಮಠದ ಟ್ರೇನಿಂಗ್ ಸೆಂಟರಿನಲ್ಲಿದ್ದಾಗ, ಬೆಳಗಿನ ಜಾವ ಮಹಾರಾಜ್ ಅದ್ವೈತ ಆಶ್ರಮದ ಕ್ಯಾಮೆರಾಮೆನ್ ವಿಶ್ವನಾಥ ಸೇನ್‌ಗುಪ್ತಾರವರ ಜೊತೆ ಹಾಜರಾದರು. ಠಾಕೂರರಿಗೆ ವಸ್ತ್ರವನ್ನುಡಿಸುವ ಮೊದಲೇ ವಿವಿಧ ಭಂಗಿಗಳಲ್ಲಿ ಠಾಕೂರರ ಮೂರ್ತಿಯ ಫೋಟೋಗಳನ್ನು ತೆಗೆಯಲಾಯಿತು. ನಂತರ ಬೇಲೂರು ಮಠದ ಸರ್ವಾಂಗ ಸುಂದರ ಠಾಕೂರರ ಮೂರ್ತಿಯಂತೆ ಕೆತ್ತನೆ ಮಾಡಲು ಈ ಫೋಟೋಗಳನ್ನೆಲ್ಲ ಶಿಲ್ಪಿಗೆ ಕೊಟ್ಟರು. ಠಾಕೂರರ ಕೆಲಸ ಪರಿಪೂರ್ಣವಾಗುವಂತೆ ಈ ಸಾಧುಗಳ ಅದಮ್ಯ ಉತ್ಸಾಹ, ನಿಷ್ಠೆ, ಪ್ರಯತ್ನ ಹಾಗೂ ಪ್ರೀತಿ ನಿಜವಾಗಿಯೂ ನೋಡುವಂಥವು. ನನ್ನ ಟ್ರೇನಿಂಗ್ ಮುಗಿದಾಗ ನಾನೊಂದು ದಿನ ಕಾಂಕುರಗಾಛಿಗೆ ಹೋಗಿ ಹೇಳಿದೆ, ''ಮಹಾರಾಜ್, ಟ್ರೇನಿಂಗ್ ಮುಗಿಯಿತು. ನಿಮಗೆ ಪ್ರಣಾಮ ಸಲ್ಲಿಸಲು ಬಂದಿದ್ದೇನೆ.'' ಅವರೆಂದರು, ''ಎಂದಾದರೂ ಚಪ್ಪಲಿ ಏಟನ್ನು ತಿಂದಿದ್ದೀಯಾ?'' ನಾನೆಂದೆ, ''ಇಲ್ಲ.'' ''ಹಾಗಾದರೆ ನಿನ್ನ ಟ್ರೇನಿಂಗ್ ಮುಗಿದಿಲ್ಲ. ನಿನ್ನ ಅಹಂಕಾರ ಮುರಿದಿಲ್ಲ. ನೋಡು, ನಮ್ಮ ಟ್ರೇನಿಂಗ್ ಜೀವನ ವಿಡೀ ನಡೆಯುತ್ತದೆ. 'ಜೀವನವಿರುವವರೆಗೂ ಕಲಿಯುವೆ.' ಕಲಿಯುತ್ತಾ ಹೋಗು. ಕಲಿಕೆಗೆ ಕೊನೆಯುಂಟೇನಪ್ಪ?'' ಮಹಾರಾಜರ ಈ ಮಾತುಗಳು ನನ್ನ ಹೃದಯಕ್ಕೆ ನಾಟಿದವು. ೪೭ ವರ್ಷಗಳಿಂದ ವಿದೇಶದಲ್ಲಿ ಠಾಕೂರರ ಕೆಲಸದಲ್ಲಿ ತೊಡಗಿರುವೆ, ಇಂದಿಗೂ ವಿದ್ಯಾರ್ಥಿಯಾಗಿಯೇ ಉಳಿದಿರುವೆ. ಟ್ಯಾಂಟೀನ್ (ಮಿಸ್ ಜೋಸೆಫಿನ್ ಮ್ಯಾಕ್ಲಿಯಾಡ್, ಸ್ವಾಮಿ ವಿವೇಕಾನಂದರ ನಿಕಟ ಸ್ನೇಹಿತೆ) ಹೇಳುತ್ತಿದ್ದರು– ''Swamiji was a great learner, so he was ever fresh.''

ಅದಿರಲಿ, ಕಾಂಕುರಗಾಛಿಯಲ್ಲಿ ಠಾಕೂರರ ಅಮೃತಶಿಲಾ ಮೂರ್ತಿಯ ಪ್ರತಿಷ್ಠಾಪನೆಗಾಗಿ ರುದ್ರ ಹೋಮವನ್ನು ಮಾಡಲು ಮಹಾರಾಜರು ಕಾಶಿಯಿಂದ ವೈದಿಕ ಬ್ರಾಹ್ಮಣರನ್ನು ಕರೆತಂದರು. ನಾನಾಗ ಅದ್ವೈತ ಆಶ್ರಮದಲ್ಲಿ ಬ್ರಹ್ಮಚಾರಿಗಳಿಗೆ ವೇದಪಾಠವನ್ನು ಕಲಿಸುತ್ತಿದ್ದೆ. ಮಹಾರಾಜರು ನನಗೆಂದರು, ''ನೋಡು, ನೀನು ನಿನ್ನ ತಂಡವನ್ನು ಕರೆದುಕೊಂಡು ಬಾ. ಠಾಕೂರರ ಎದುರು ವೇದಪಠಣ ಹಾಗು ರುದ್ರಪಠಣ ಮಾಡುವೆಯಂತೆ. ಈ ಕಾಶಿಯ ಪಂಡಿತರನ್ನು ಸೋಲಿಸಬೇಕು, ತಿಳಿಯಿತೆ?'' ಮಾತುಗಳ ಮೂಲಕ ಅವರು ನಮ್ಮಲ್ಲಿ ಶಕ್ತಿಯನ್ನು ತುಂಬುತ್ತಿದ್ದರು. ಉತ್ಸವದ ಸಂದರ್ಭದಲ್ಲಿ ನಾವು ವೇದವನ್ನು ಪಠಿಸಿದಾಗ ಕಾಶಿಯ ಪಂಡಿತರು ಆಶ್ಚರ್ಯಚಕಿತರಾದರು.

ಅದಾದ ನಂತರ ಬಗೆಬಗೆಯ ತಿನಿಸುಗಳು ಹಾಗು ಸಿಹಿತಿಂಡಿಗಳನ್ನೊಳಗೊಂಡ ಭೋಜನ ಕೂಟ. ಮಹಾರಾಜ್ ಆಗ ಸಂಘದ ಉಪಾಧ್ಯಕ್ಷರಾಗಿದ್ದರು. ರಸಗುಲ್ಲಾದ ಬಕೆಟನ್ನು ಹಿಡಿದುಕೊಂಡು ತಾವೇ ಸಾಧುಗಳಿಗೆ ಬಡಿಸಲಾರಂಭಿಸಿದರು. ನನ್ನ ಪಕ್ಕದಲ್ಲಿ ಜೀವಾನಂದಜೀ ಕುಳಿತಿದ್ದರು. ಅವರಿಗೆ diabetes ಇತ್ತು. ಮಹಾರಾಜರು ಒಂದಷ್ಟು ರಸಗುಲ್ಲಾ ಅವರ ಎಲೆಗೆ ಬಡಿಸುತ್ತ ಹೇಳಿದರು, ''ತಿನ್ನು.. ಚೆನ್ನಾಗಿ ತಿನ್ನು.'' ''ಮಹಾರಾಜ್ ನನಗೆ diabetes ಇದೆ.'' ''ನೋಡು ಒಂದಲ್ಲ ಒಂದು

ದಿನ ನೀನು ಸಾಯಲೇ ಬೇಕು, ತಿಂದೇ ಸಾಯಿ.''

ಅನಂಗ ಮಹಾರಾಜರಿಗೆ ಸಂಬಂಧಪಟ್ಟ ವಿವಿಧ ಘಟನೆಗಳು — ವಿವಿಧ ಸಂದರ್ಭಗಳಲ್ಲಿ ಅವರು ಹೇಳಿದ್ದನ್ನು ನನ್ನ ಡೈರಿಯಲ್ಲಿ ಬರೆದಿಟ್ಟುಕೊಂಡಿದ್ದೇನೆ. ಅವುಗಳಲ್ಲಿ ಕೆಲವು :

**೨೮.೦೨.೧೯೬೬, ಕಾಂಕುರಗಾಛಿ**

**ಮಹಾರಾಜ್:** ಆಗ ಮಠವು ವರಾಹನಗರದಲ್ಲಿತ್ತು. ಒಂದು ಸಂಜೆ ಸ್ವಾಮೀಜಿ ಬಲರಾಮ ಮಂದಿರದ ಹಾಲ್‌ನಲ್ಲಿ ಕುಳಿತು ಠಾಕೂರರೊಂದಿಗೆ ಮಾತನಾಡುತ್ತಿದ್ದಾರೆ. ವರಾಂಡದಲ್ಲಿ ನಿಂತಿದ್ದ ಬಾಬುರಾಮ ಮಹಾರಾಜರ ಸೋದರ ತುಲಸೀಬಾಬು ವಿಗೆ ಕೇಳಿಸಿತು – ಸ್ವಾಮೀಜಿ ಹೇಳುತ್ತಿದ್ದಾರೆ, ''ಹಾವಭಾವಗಳಿಂದ ಬರಿಯ ಮಾತುಗಳನ್ನಾಡಿದರೆ ಪ್ರಯೋಜನವೇನು? ಕೆಲಸ ಮಾಡಿಸಿಕೊಳ್ಳಬೇಕೆಂದಿದ್ದರೆ ನನ್ನ ಕೈಹಿಡಿದು ಕೆಲಸವನ್ನು ಮಾಡಿಸಿಕೊಳ್ಳಿ, ಇಲ್ಲವಾದರೆ ಅದೆಲ್ಲ ನನ್ನಿಂದ ಸಾಧ್ಯವಿಲ್ಲ.'' ನಂತರ ತಮ್ಮ ಜೀವನ ಸಂಧ್ಯೆಯಲ್ಲಿ ಸ್ವಾಮೀಜಿ ಯೋಗೀನ್-ಮಾಗೆ ಹೇಳಿದ್ದರು: ''ಯೋಗಿನ್ ಮಾ, ನಾನಿನ್ನು ಹೆಚ್ಚು ಸಮಯ ಬದುಕುವುದಿಲ್ಲವೆಂದು ತೋರುತ್ತದೆ. ಏಕೆಂದರೆ, ಶ್ರೀಮಾತೆಯವರು ನನ್ನ ಕೈಯನ್ನು ಬಿಟ್ಟುಬಿಟ್ಟಿದ್ದಾರೆ.''

ಒಂದು ದಿನ ದಕ್ಷಿಣೇಶ್ವರದಲ್ಲಿ ಕೇಶವಚಂದ್ರ ಸೇನರು ಠಾಕೂರರಿಗೆ ಹೇಳಿದರು, ''ನೀವೇನಾದರೂ ಅನುಮತಿಸಿದರೆ, ನಾನು ನಿಮ್ಮ ಪ್ರಚಾರವನ್ನು ಮಾಡುವೆ.'' ಮೊದಲಿಗೆ ಠಾಕೂರರಿಗೆ ಇದು ಕೇಳಿಸಲಿಲ್ಲ. ಕೇಶವ ಸೇನ್ ಮತ್ತೆ ಹೇಳಿದರು, ''ನೀವು ಹೇಳಿದರೆ ನಿಮ್ಮ ಪ್ರಚಾರವನ್ನು ನಾನು ಮಾಡುವೆ.'' ಠಾಕೂರ್ ಹೇಳಿದರು, ''ನೀನು– ಕೇಶವ, ನೀನು ಪ್ರಚಾರ ಮಾಡುವುದೆ? ಇದರೊಳಗೆ (ತಮ್ಮ ದೇಹವನ್ನು ತೋರಿಸುತ್ತ) ಇರುವವನು ಪ್ರಕಾಶಿಸಲ್ಪಡಲು ಬಯಸಿದರೆ, ಹಿಮಾಲಯ ಪರ್ವತವೂ ಅದನ್ನು ತಡೆಯಲಾಗದು.''

ಠಾಕೂರರು ಪತಿತಪಾವನರೂ ಕಪಾಲಮೋಚಕರೂ ಆಗಿದ್ದಾರೆ. ಮಹಾರಾಜ್ ಹೇಳಿದ್ದರು, ''ಗಿರೀಶಬಾಬು ಒಂದು ರಾತ್ರಿ ಒಂದು ವಾಹನದ ತುಂಬ ಅನೇಕ ವೇಶ್ಯೆಯರನ್ನು ಕರೆದುಕೊಂಡು ದಕ್ಷಿಣೇಶ್ವರಕ್ಕೆ ಬಂದರು. ಠಾಕೂರರು 'ಹರಿ ಬೋಲ್, ಹರಿ ಬೋಲ್,' ಎನ್ನುತ್ತ ಅವರೊಡನೆ ನರ್ತಿಸಿದರು. ಬಳಿಕ ಗಿರೀಶನ ಪಾಪಗಳನ್ನೆಲ್ಲ ಸ್ವೀಕರಿಸಿ ಅವನಿಗೆ ನವಜೀವನವನ್ನು ಕರುಣಿಸಿದರು. ಠಾಕೂರರು ಕರುಣಾವತಾರರು!''

ಸ್ವಾಮೀಜಿ ಅಮೆರಿಕಾಗೆ ಹೋಗುವ ಮುನ್ನ ಶರತ್ ಮಹಾರಾಜರಿಗೆ ಬರೆದರು: ''ಶರತ್, ಠಾಕೂರರು ನನಗೆ ಅಮೆರಿಕಾಗೆ ಹೋಗಬೇಕೆಂದು ನನಗೆ ದರ್ಶನದಲ್ಲಿ ಹೇಳಿದರು. ಆದರೆ ನನ್ನ ಮನಸನ್ನು ಸ್ಥಿರಪಡಿಸಲು ಸಾಧ್ಯವಾಗುತ್ತಿಲ್ಲ. ನೀನು ಶ್ರೀಮಾತೆಯವರಿಗೆ ಈ ವಿಷಯವನ್ನು ತಿಳಿಸಿ ಈ ಬಗ್ಗೆ ಅವರ ಅಭಿಪ್ರಾಯವೇನೆಂದು ನನಗೆ ಹೇಳು.'' ಈ ಪತ್ರವನ್ನು ಶರತ್ ಮಹಾರಾಜರು ಶ್ರೀಮಾತೆಯವರ ಬಳಿಗೆ ತೆಗೆದುಕೊಂಡು ಹೋಗಿ ಅವರಿಗೆ ಓದಿ ಹೇಳಿದರು. ಎರಡು ದಿನಗಳ ಬಳಿಕ ಅವರು ಶರತ್ ಮಹಾರಾಜರಿಗೆ ಹೇಳಿದರು: ''ನರೇನ್‌ಗೆ ಅವನು ಹೋಗಬೇಕೆಂಬುದಾಗಿ ಬರೆ.''

* * * *

೧೯೭೦ರಲ್ಲಿ ನಕ್ಸಲರ ಆಂದೋಲನ ನಡೆಯುತ್ತಿತ್ತು. ಸಂಜೆಯಾಯಿತೆಂದರೆ ಕಲ್ಕತ್ತೆಯ ರಸ್ತೆಗಳಲ್ಲಿ ಜನರು ಓಡಾಡಲು ಹೆದರುತ್ತಿದ್ದರು. ಬೇಲೂರು ಮಠಕ್ಕೆ ಬರುವ ಭಕ್ತರ ಸಂಖ್ಯೆ ಕಡಿಮೆಯಾಯಿತು. ಮಠದ ಆರ್ಥಿಕ ಸ್ಥಿತಿ ಕುಂದಿತು. ಮಹಾರಾಜರೆಂದೂ ಧೃತಿಗೆಡಲಿಲ್ಲ. ಭವಿಷ್ಯವನ್ನು ಕಂಡವರಂತೆ ಹೇಳುತ್ತಿದ್ದರು: ''ಒಂದು ದೊಡ್ಡ ಅಲೆ ಎದ್ದಿದೆ. ಹೆಚ್ಚು ದಿನಗಳು ಇರುವುದಿಲ್ಲ.'' ಅವರ ಮಾತು ನಿಜವಾಯಿತು. ಗಂಭೀರ ಮಹಾರಾಜರು, ''ಈ ರೀತಿ ಕೆಲಸವನ್ನು ಮುಂದುವರಿಸಲಾಗದು,'' ಎಂದರು. ಅದನ್ನು ಕೇಳಿದ ಮಹಾರಾಜರೆಂದರು, ''ಬಲರಾಮ ಬಾಬುವಿನ ಮಾತುಗಳನ್ನು ನೆನೆದುಕೊ. ಅವರ ನಿಕಟವರ್ತಿಗಳೆಲ್ಲ ತೀರಿಹೋಗಿರುವಾಗ ಅವರು ಒಂದು ಕೈಯಿಂದ ಕಣ್ಣೊರೆಸಿಕೊಂಡು ಮತ್ತೊಂದು ಕೈಯಿಂದ ಠಾಕೂರರ ಶಿಷ್ಯರುಗಳಿಗೆ ಆಹಾರವನ್ನು ಬಡಿಸುತ್ತಿದ್ದಾರೆ. ಈ ಮನೋಭಾವದಿಂದ ನಾವು ಕೆಲಸ ಮಾಡಬೇಕು.''

* * * *

ಮಾತಿನ ಮಧ್ಯದಲ್ಲಿ ಒಂದು ದಿನ ಅನಂಗ ಮಹಾರಾಜರು ಮಹಾಪುರುಷ ಮಹಾರಾಜ್ ಹಾಗೂ ಬಾಲಾನಂದ ಬ್ರಹ್ಮಚಾರಿಗಳ ಸಂದರ್ಶನದ ಈ ಘಟನೆಯನ್ನು ನಮಗೆ ಹೇಳಿದರು. ''ಮಹಾಪುರುಷ ಮಹಾರಾಜರು, ಸ್ವಾಮಿ ಜಗದಾನಂದರು ಹಾಗೂ ಇತರ ಸಾಧುಗಳನ್ನು ಬಾಲಾನಂದರು ತಮ್ಮ ಆಶ್ರಮಕ್ಕೆ ಆಮಂತ್ರಿಸಿದ್ದರು. ಕಾರಣ, ಒಂದು ದಿನ ತಿರುಗಾಡುತ್ತ ಮಹಾಪುರುಷ ಮಹಾರಾಜರು ಈ ಆಶ್ರಮದ ಹತ್ತಿರ ಬಂದಾಗ ಇದು ಬಾಲಾನಂದರ ಆಶ್ರಮವೆಂದು ತಿಳಿದು, ಒಳಗೆ ಹೋಗಿ ಬಾಲಾನಂದಜಿಯವರನ್ನು ಕಂಡಿದ್ದರು. ಆಶ್ರಮದವರು ಮಹಾಪುರುಷ ಮಹಾರಾಜರನ್ನು ತಮ್ಮಲ್ಲಿಗೆ ಸ್ವಾಗತಿಸಿದ್ದರು. ರಾಮಕೃಷ್ಣ ಮಹಾಸಂಘದ ಅಧ್ಯಕ್ಷರು ತಾವಾಗಿಯೇ ಅಲ್ಲಿಗೆ ಹೋದಾಗ ಸಂತೋಷಪಟ್ಟ ಅವರು ಇನ್ನೊಮ್ಮೆ ಒಂದು ಉತ್ಸವದ ದಿನದಂದು ನಮ್ಮನ್ನು ಆಮಂತ್ರಿಸಿದ್ದರು. ಆಶ್ರಮದಲ್ಲೊಂದು ಬೇವಿನ ಮರವಿತ್ತು. ಅದರ ಸುತ್ತಲೂ ಕಟ್ಟಿದ್ದ ಗೋಲಾಕಾರದ ಕಟ್ಟೆಯಲ್ಲಿ ಬಾಲಾನಂದರೂ ಅವರ ಪಕ್ಕದಲ್ಲಿ ಮಹಾಪುರುಷ ಮಹಾರಾಜರೂ ಕುಳಿತರು. ಅವರ ಸ್ವಲ್ಪ ಹಿಂದೆ ಸ್ವಾಮಿ ಜಗದಾನಂದರೂ, ನಮ್ಮ ಕೆಲವು ಗೃಹಸ್ಥ ಭಕ್ತರೂ ಕುಳಿತಿದ್ದರು. ಮಹಾಪುರುಷ್‌ಜೀ ಹಾಗೂ ಬಾಲಾನಂದಜಿಯವರ ನಡುವೆ ಮಾತುಕತೆ ನಡೆಯುತ್ತಿತ್ತು. ತನ್ಮಧ್ಯೆ ಬಾಲಾ

ನಂದ ಸ್ವಾಮಿಗಳು ಜ್ಞಾನಿ ಹಾಗು ವಿಜ್ಞಾನಿಯ ನಡುವೆ ಇರುವ ವ್ಯತ್ಯಾಸವೇನೆಂದು ಕೇಳಿದರು. ಮಹಾಪುರುಷ ಮಹಾರಾಜರು ''ಶಂಕರಾಚಾರ್ಯರು ವಿಜ್ಞಾನಿ'' ಎಂದು ಹೇಳಿದಾಗ, ಸ್ವಲ್ಪ ದೂರದಲ್ಲಿ ನಿಂತಿದ್ದ ಆಶ್ರಮದ ಸಂನ್ಯಾಸಿಗಳಾದ ಸ್ವಾಮಿ ಪೂರ್ಣಾನಂದರು ಮುಂದೆ ಬಂದು ಕೈಜೋಡಿಸಿ ಸಂಸ್ಕೃತ ಶ್ಲೋಕವೊಂದನ್ನು ಉಲ್ಲೇಖಿಸಿ, ''ಹಾಗಾದರೆ, ದಯವಿಟ್ಟು ಈ ಶ್ಲೋಕದ ಅರ್ಥವೇನೆಂದು ಹೇಳಿ,'' ಎಂದರು. ಆಗ ನನ್ನ ಸ್ನೇಹಿತರು ನನ್ನನ್ನು ಸ್ಪರ್ಶಿಸಿ, ''ಹೇ ಅನಂಗ, ನೀನು ಉತ್ತರಿಸು'' ಎಂದಾಗ ನಾನೆಂದೆ, ''ಅವರ ಮಾತುಗಳ ನಡುವೆ ನಾನೇಕೆ ಹೋಗಲಿ? ಜಗದಾನಂದ ಸ್ವಾಮಿಗಳಿಗೆ ಹೇಳಿ.'' ಆದರೆ ಮತ್ತೆ ಪೂರ್ಣಾನಂದರು, ''ಈ ಶ್ಲೋಕದಲ್ಲಿ ಶಂಕರಾಚಾರ್ಯರು ಜ್ಞಾನಿಯೋ, ವಿಜ್ಞಾನಿಯೋ ಎಂದು ಹೇಳಿರಿ,'' ಎಂದಾಗ ನಾನು ಎದ್ದು ನಿಂತು ಕೈ ಮುಗಿದು ಹೇಳಿದೆ, ''ಅನುಮತಿ ನೀಡಿದರೆ ಇದರ ಉತ್ತರವನ್ನು ನಾನೇ ಹೇಳುತ್ತೇನೆ.'' ಇದನ್ನು ಕೇಳಿದ ಮಹಾಪುರುಷಜಿ, ''ಸರಿ, ಸರಿ, ನೀನೇ ಉತ್ತರಿಸು''ಎಂದಾಗ ನಾನು ಪೂರ್ಣಾನಂದಜಿಯವರಿಗೆ ಹೇಳಿದೆ, ''ನೀವು ತರ್ಕ ಮಾಡಲು ಇಚ್ಛಿಸುವಿರಾ ಅಥವ ಅಧ್ಯಾತ್ಮವನ್ನು ಕೇಳಲು ಬಯಸುವಿರಾ?'' ಅವರೆಂದರು: ''ಅಧ್ಯಾತ್ಮವನ್ನು ಕೇಳಲು ಬಯಸುವೆ.'' ನಾನೆಂದೆ, ''ನಿಮ್ಮಿಬ್ಬರ ನಡುವೆ ಅಧ್ಯಾತ್ಮದ ಕುರಿತೇ ಮಾತುಕತೆಯಾಗುತ್ತಿತ್ತು. ಆದ್ದರಿಂದ ನೀವು ತರ್ಕವನ್ನೇ ಬಯಸುತ್ತೀರಿ. ತರ್ಕ ಮಾಡುವುದೇ ನಿಮ್ಮ ಇಚ್ಛೆಯಾದ್ದರಿಂದ, ತರ್ಕಕ್ಕೆ ಒಂದು ಸಾಧಾರಣ ಭಾಷೆಯ ಅಗತ್ಯವಿದೆ.'' ಮೊದಲು ಬಂಗಾಳಿ, ಹಿಂದಿ, ಆಂಗ್ಲ ಅಥವ ಸಂಸ್ಕೃತ — ಯಾವ ಭಾಷೆಯಲ್ಲಿ ತರ್ಕ ಮಾಡುವುದೆಂದು ನಿರ್ಣಯವಾಗಲಿ. ನನಗೆ ಹಿಂದಿ ಚೆನ್ನಾಗಿ ಬರದು. ಉಳಿದ ಭಾಷೆಗಳಲ್ಲಿ ಚರ್ಚಿಸಬಲ್ಲೆ.'' ಈ ಮಾತುಗಳನ್ನು ನಾನು ಜೋರಿನಿಂದ ಹೇಳಿದಾಗ ಬಾಲಾನಂದಜಿಯವರಿಗೆ ವಿಷಯವೇನೆಂದು ತಿಳಿಯಿತು. ಅವರ ಮೊದಲೇ ನನ್ನ ಬಗ್ಗೆ ತಿಳಿದಿದ್ದರು. ಅವರು ಪೂರ್ಣಾನಂದರಿಗೆ, ''ಏನು ಮಾಡುತ್ತಿರುವೆ? ಅವರನ್ನು ನಾವು ಆಮಂತ್ರಿಸಿದ್ದೇವೆ. ನೀನು ಇಲ್ಲಿಂದ ಹೋಗು'' ಎಂದು ಆದೇಶಿಸಿದಾಗ ಪೂರ್ಣಾನಂದರು ಅಲ್ಲಿಂದ ಹೊರಟು ಹೋದರು. ಹುಲಿಯ ಬಾಯಿಂದ ಆಡನ್ನು ಬಿಡಿಸಿದಂತೆ ನನಗನ್ನಿಸಿತು. ನನ್ನ ಮೈ ಕೋಪದಿಂದ ಉರಿಯುತ್ತಿತ್ತು.''

ಓಂಕಾರಾನಂದಜಿಯವರು ಸಿಂಹದಂತೆ ಗರ್ಜಿಸುತ್ತಿದ್ದರು. ಸಂಘಗುರುಗಳ ಗೌರವವನ್ನು ರಕ್ಷಿಸುವುದು ಹೇಗೆಂಬುದನ್ನು ನೋಡಿ ನಾವು ಮೂಕವಿಸ್ಮಿತರಾದೆವು.

* * * *

ನಾನು ಹಾಲಿವುಡ್‌ನಲ್ಲಿದ್ದಾಗ ಮಹಾರಾಜರೊಂದಿಗೆ ಪತ್ರ ಮೂಲಕ ವ್ಯವಹರಿಸುತ್ತಿದ್ದೆ. ಅವರು ಉತ್ಸಾಹ ಹಾಗೂ ಪ್ರೇರಣಾದಾಯಕ ಪತ್ರಗಳನ್ನು ಬರೆಯುತ್ತಿದ್ದರು. ಕೆಲವು ಪತ್ರಗಳನ್ನು ಇಲ್ಲಿ ಉಲ್ಲೇಖಿಸುತ್ತಿದ್ದೇನೆ:

**ಪತ್ರ ೧ )**

ಶ್ರೀರಾಮಕೃಷ್ಣ ಯೋಗೋದ್ಯಾನ
೧೯.೭.೧೯೭೧

ಪ್ರೀತಿಯ ಚೇತನಾನಂದ,

ನಿನ್ನ ಪತ್ರವು ಸಕಾಲದಲ್ಲಿ ತಲುಪಿತು. ಫ್ರಾನ್ಸ್‌ನಲ್ಲಿ ಸ್ವಲ್ಪ ತೊಂದರೆಗೀಡಾದೆಯೆಂದು ತಿಳಿದು ಬಹಳ ದುಃಖವಾಯಿತು. ಈಗ ನೀನು ಸ್ವತಂತ್ರ ದೇಶದ ಸ್ವತಂತ್ರ ಜನರೊಂದಿಗೆ ಇರಬೇಕು. ಅನೇಕ ವಿಷಯಗಳನ್ನು ನೀನು ಕಲಿಯಬೇಕಾಗಿದೆ. ಅನೇಕ ಅಡೆತಡೆಗಳೂ ಇರುತ್ತವೆ. ಈ ಎರಡು ಕಾರ್ಯಗಳನ್ನು ನೀನು ವಿಶೇಷವಾಗಿ ಮಾಡಬೇಕು. ೧) ಅಲ್ಲಿ organizationನ ಬಗ್ಗೆ ಚೆನ್ನಾಗಿ ತಿಳಿದುಕೊಂಡು ನಮ್ಮ ದೇಶದಲ್ಲೂ ಅಲ್ಲಿನಂತೆ organize ಮಾಡುವುದು. ಎರಡನೆಯದಾಗಿ, ಆ ದೇಶದ ಜನರಿಗೆ ಬೇಕಾಗಿರುವುದೇನು, ಧರ್ಮದ ಬಗ್ಗೆ ಅವರಿಗಿರುವ ತಿಳುವಳಿಕೆ ಹಾಗೂ ನಾವು ಮಾಡುವ ಪ್ರಚಾರ — ಇವುಗಳ ಬಗ್ಗೆ ವಿಶೇಷ ಗಮನ ಕೊಡಬೇಕು. ಏನೇ ಇರಲಿ, ಈಗ ನೀನು ಹೇಗೆ ಕೆಲಸ ಮಾಡಬೇಕೆಂಬುದನ್ನು ನಿರ್ಧರಿಸು. ಅದಲ್ಲದೆ, ಭವಿಷ್ಯತ್ತಿನಲ್ಲಿ ಪಾಶ್ಚಾತ್ಯ ದೇಶದ ಪ್ರಚಾರಕಾರ್ಯ ನಡೆಸುವ ಬಗೆಯನ್ನೂ ಚಿಂತನೆ ಮಾಡು. ಧರ್ಮಜೀವನವೇ ಎಲ್ಲದಕ್ಕೂ ಪ್ರಧಾನ ಮೂಲ. ನನ್ನ ದೇಹಾರೋಗ್ಯ ಪರವಾಗಿಲ್ಲವೆಂದೇ ಹೇಳಬೇಕು. ಮತ್ತೊಮ್ಮೆ ಚೆಕ್-ಅಪ್ ಮಾಡಿಸಬೇಕು. ನನ್ನ ಆಶೀರ್ವಾದವನ್ನು ಸ್ವೀಕರಿಸು.

ಇತಿ, ನಿನ್ನ ಶುಭಾಕಾಂಕ್ಷಿ
ಓಂಕಾರಾನಂದ

**ಪತ್ರ ೨ )**

ಶ್ರೀರಾಮಕೃಷ್ಣ ಯೋಗೋದ್ಯಾನ
೪.೮.೧೯೭೧

ಪ್ರೀತಿಯ ಚೇತನಾನಂದ,

ನಿನ್ನ ಪತ್ರವನ್ನೋದಿ ತುಂಬ ಆನಂದವಾಯಿತು. ಸ್ವತಂತ್ರ ದೇಶದ ವಾಯುಗುಣವೇ ಬೇರೆ. ಅಲ್ಲಿಗೆ ಹೋದರೆ ಜನರ ಹೃದಯದಲ್ಲಿ ಸ್ವಾತಂತ್ರ್ಯದ ಭಾವ ಜಾಗೃತವಾಗುತ್ತದೆ. ಆದರೆ ಅದರಿಂದಾಗುವ ಒಂದು ಅಪಾಯವೆಂದರೆ ಆ ಜನಾಂಗದವರನ್ನು ಅನುಕರಿಸುವ ಪ್ರವೃತ್ತಿ ಉಂಟಾಗುತ್ತದೆ. ಇದರಿಂದ ಪಾರಾಗಲು ನಾವು ಸದಾ ಎಚ್ಚರದಿಂದಿರಬೇಕು. ದಿನಗಳು ಕಳೆದಂತೆ ಭಾರತದ ತ್ಯಾಗ, ತಪಸ್ಸಿನ ಬೆಲೆ ಹಾಗೂ ಸ್ವಾಮೀಜಿಯ ಅಧ್ಯಾತ್ಮ-ಭಾವದ ಪ್ರಚಾರದ ಮೌಲ್ಯ ನಿನಗೆ ತಿಳಿಯುತ್ತದೆ. ಕರ್ಮ ಮಾಡುವುದು ಬಹಳ ಒಳ್ಳೆಯದು. ಆದರೆ ಕರ್ಮಕ್ಕೂ ಐಶ್ವರ್ಯವಿದೆ. ಮನುಷ್ಯನು ಸಹಜವಾಗಿಯೇ ಐಶ್ವರ್ಯದಲ್ಲಿ ಆಸಕ್ತನಾಗುತ್ತಾನೆ. ಇದನ್ನು ಕತ್ತರಿಸುವ ಏಕಮಾತ್ರ ಉಪಾಯವೆಂದರೆ ಭಗವಂತನ ಜಪ-ಧ್ಯಾನ.

ನಿನ್ನ ಆರೋಗ್ಯ ಚೆನ್ನಾಗಿದೆಯೆಂದು ಆಶಿಸುತ್ತೇನೆ. ದಿನ-ದಿನಕ್ಕೂ ಶ್ರೀರಾಮಕೃಷ್ಣರ ಭಾವದಲ್ಲಿ ಅನುರಕ್ತನಾಗಿ ಆತನ ಕಾರ್ಯವನ್ನು ಮಾಡಲು ಶಕ್ತನಾಗುವೆಯೆಂದು ಆಶಿಸುತ್ತೇನೆ.